O.S. 102/2011

P.W. 3

**<u>ಸಾಕ್ಷಿಯನ್ನು ದಿನಾಂಕಃ 19-10-2019 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು</u>**.

**<u>ಪಾಟೀಸವಾಲು ಪ್ರತಿವಾದಿಯ ಪರ ವಕೀಲರಾದ ಶ್ರೀ ಜಿ ಸಿ ಜಿ ರವರಿಂದಃ</u>**

ಸರ್ವೆ ನಂಬರ್ 57 ರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ಅದರಲ್ಲಿ ಒಟ್ಟು 8 ಎಕರೆ ಜಮೀನು ಇದೆ. ಸದರಿ ಸರ್ವೆ ನಂಬರ್ ದಲ್ಲಿ ಒಟ್ಟು 10 ಎಕರೆ ಚಿಲ್ಲರೆ ಇದೆ ಎಂದರೆ ಸಾಕಿಯು ಇಲ್ಲ 8 ಎಕರೆ 0 . 40 ಸೆಂಟ್ಸ್ ಇದೆ ಎಂದು ನುಡಿಯುತ್ತಾರೆ. 4 ನೇ ಪ್ರತಿವಾದಿಯ ಹೊಲ ನೋಡಿರುತ್ತೇನೆ. ಸದರಿ ಹೊಲದ ಸರ್ವೆ ನಂಬರ್ 57. ವಾದಿಗಳಿಗೆ ಸೇರಿದ ಜಮೀನು 8 ಎಕರೆ 0.40 ಸೆಂಟ್ಸ್ ಮತ್ತು 4 ನೇ ಪ್ರತಿವಾದಿಗೆ ಸೇರಿದ ಜಮೀನು ಸೇರಿಸಿ ಒಟ್ಟು 10 ಎಕರೆ ಚಿಲ್ಲರೆ ಜಮೀನು ಸರ್ವೆ ನಂಬರ್ ದಲ್ಲಿ ಇದೆ ಎಂದರೆ ಸರಿ. ವಾದಿಯರ ಪೂರ್ವ ಕ್ಕೆ 4 ನೇ ಪ್ರತಿವಾದಿಯರ ಜಮೀನು ಇದೆ ಎಂದರೆ ಸರಿ. 4 ನೇ ಪ್ರತಿವಾದಿಯ ಜಮೀನಿನ ಪೂರ್ವಕ್ಕೆ 5 ನೇ ಪ್ರತಿವಾದಿಯ ಸರ್ವೆ ನಂಬರ್ 31 ರ ಜಮೀನು ಬರುತ್ತದೆ ಎಂದರೆ ಸರಿ. 8 ಎಕರೆ 0.40 ಸೆಂಟ್ಸ್ ಜಮಿನಿನ ಮೂಲ 4 ನೇ ಪ್ರತಿವಾದಿ ಮತ್ತು 5 ನೇ ಪ್ರತಿವಾದಿ ಅವರುಗಳ ಜಮೀನಿಗೆ ಹೋಗುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಜಮೀನಿನ ಸರ್ವೆ ನಂಬರ್ ಸಹ 31 ಎಂದರೆ ಸರಿ. ಸರ್ವೆ ನಂಬರ್ 31 ರ ಉತ್ತರಕ್ಕೆ ಸರ್ವೆ ನಂಬರ್ 35 ಬರುತ್ತದೆ ಎಂದರೆ ಸರಿ. 4 ಮತ್ತು 5 ನೇ ಪ್ರತಿವಾದಿಗಳು 1 ಪ್ರತಿವಾದಿಗೆ ಆತನ ಜಮೀನಿಗೆ ಹೋಗಲು ತೊಂದರೆಪಡಿಸಲ್ಲ ಎಂದರೆ ಸರಿ. ವಾದಿ ಮಾತ್ರ ತೊಂದರೆಪಡಿಸುತ್ತಾನೆ ಎಂದರೆ ಸರಿ. 4 ಮತ್ತು 5 ನೇ ಪ್ರತಿವಾದಿಗಳು ಅವರ ಜಮಿನಿಗೆ ಓಡಾಡುವ ದಾರಿಯಲಲ್ಲೇ 1 ನೇ ಪ್ರತಿವಾದಿ ಆತನ ಜಮೀನಿಗೆ ಓಡಾಡುತ್ತಾನೆ ಎಂದರೆ ಸಾಕ್ಷಿಯು ಇಲ್ಲಿಯವರಗೆ ಓಡಾಡಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ, 1 ನೇ ಪ್ರತಿವಾದಿಯ ಸಹ ಅದೇ ದಾರಿಯಲ್ಲಿ ಓಡಾಡುತ್ತಾನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಇರುವ ವಿಷಗಳು ನಾನೇ ಹೇಳಿ ಬರೆಯಿಸಿರುತ್ತೇನೆ.

**ಮುಂದುವರೆದ** ಪಾಟೀಸವಾಲಿಗೆ ಮುಂದಿನ ದಿನಾಂಕವನ್ನು ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**